**ಡಿಸೆಂಬರ್**, 2019

## ಮೇಷ




ನಿಮ್ಮ ಕೈಯಲ್ಲಿರುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವಿರಿ. ಇದರಿಂದ ಗೌರವ ಮನ್ನಣೆ ದೊರೆಯುವುದು. ಮಹತ್ವದ ಕೆಲಸಗಳನ್ನು ತಿಂಗಳ ಪೂರ್ವಾರ್ಧದಲ್ಲಿ ಮಾಡಿ. ಗೃಹ ನಿರ್ಮಾಣಕ್ಕೆ ಸುಸಮಯ.

**ಶುಭ:** 4, 16, 27

**ಅಶುಭ:** 3, 12, 22

## ಕರ್ಕ



ಹಳೆಯ ಗೆಳೆಯರನ್ನು ಭೇಟಿ ಮಾಡುವಿರಿ. ಅವರಿಂದ ಹಣಕಾಸಿನ ವಿಚಾರದಲ್ಲಿ ಅನುಕೂಲವಾಗುವುದು. ಸಹೋದರ ಸಹೋದರಿಯರಿಂದ ಲಾಭ. ವಾಹನ ಕ್ರಯ–ವಿಕ್ರಯ ಮಾಡುವಿರಿ. ಉದ್ಯೋಗಸ್ಥರಿಗೆ ವರ್ಗಾವಣೆ ಸಂಭವ.

**ಶುಭ:** 12, 20, 25

**ಅಶುಭ:** 16, 19, 28

## ವೃಷಭ



ಸಹನೆ ಮತ್ತು ಸಾವಧಾನಗಳಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆ ಗಳಿಸುವಿರಿ. ಬರಬೇಕಾಗಿದ್ದ ಹಣ ಶೀಘ್ರದಲ್ಲಿ ದೊರೆಯುವುದು. ಕೋರ್ಟು–ಕಚೇರಿ ವ್ಯವಹಾರಗಳಲ್ಲಿ ಯಶಸ್ಸು. ಸರ್ಕಾರಿ ನೌಕರರಿಗೆ ಬಡ್ತಿ.

**ಶುಭ:** 5, 15, 27

**ಅಶುಭ:** 8, 19, 24

## ಸಿಂಹ



ಕೈಗೆ ಬಂದ ತುತ್ತು ಬಾಯಿಗಿಲ್ಲ ಎನ್ನುವಂತೆ ನಿಮ್ಮ ಪರಿಶ್ರಮದ ಲಾಭಾಂಶವು ಪರರ ಪಾಲಾಗುವುದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಮಾಡುತ್ತಿರುವವರಿಗೆ ಶುಭಫಲ. ಹೊಸ ವಸ್ತು ಖರೀದಿ ಮುಂದಕ್ಕೆ ಹಾಕಿ.

**ಶುಭ:** 16, 24, 29

**ಅಶುಭ:** 15, 19, 23

## ಮಿಥುನ



ಅನಗತ್ಯ ಖರ್ಚಿನ ದಾರಿ ಹುಡುಕಬೇಡಿ. ಇದರಿಂದ ತೊಂದರೆ ಎದುರಾಗುವುದು. ಒಳ್ಳೆಯ ಕಾರ್ಯಗಳಿಗೆ ಹಣ ಖರ್ಚು ಮಾಡಿ. ಭೂಮಿ ಖರೀದಿ ಯೋಗವಿದೆ. ಮನೆಯಲ್ಲಿ ಶುಭಕಾರ್ಯ.

**ಶುಭ:** 16, 21, 26

**ಅಶುಭ:** 14, 22, 28

## ಕನ್ಯಾ



ನಿಮ್ಮ ಯಶಸ್ಸು ಕಂಡು ಸಹಿಸಲಾಗದವರು ನಿಮ್ಮ ಮೇಲೆ ವಿನಾಕಾರಣ ಆರೋಪ ಮಾಡುವರು. ಹೆಚ್ಚಿಗೆ ಚಿಂತಿಸದೆ ನಿಮ್ಮ ಕೆಲಸ ನೀವು ಮಾಡಿ. ಕೋರ್ಟು–ಕಚೇರಿ ವ್ಯವಹಾರದಲ್ಲಿ ಯಶಸ್ಸು. ಹಣಕಾಸು ಪರಿಸ್ಥಿತಿ ಉತ್ತಮ.

**ಶುಭ:** 11, 18, 26

**ಅಶುಭ:** 13, 25, 29